ಎಂ.ವಿ.ಸಿ. ನಂ.1200/2025
PW-1

(ಇಂದು ದಿನಾಂಕಃ 15-05-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಶ್ರೀ VBC ವಕೀಲರಿಂದಃ**

ಅಪಘಾತ ಆದ ದಿನ ನಾನು ಸ್ಪೆಂಡರ್ ಮೋಟಾರ ಸೈಕಲ್ ಮೇಲೆ ಪರೀಕ್ಷೆ ಕೇಂದ್ರ ನೋಡಲು ತಾಂಡೂರಿಗೆ ಹೋಗುತ್ತಿದ್ದೆ. ನನಗೆ ಬೈಕ್ ನಂಬರ ಹೇಳಲು ಬರುವುದಿಲ್ಲ. ನಾನು ಮತ್ತು ನನ್ನ ಗೆಳೆಯ ಮೋಟಾರ ಸೈಕಲ್ ಮೇಲೆ ಹೋಗುತ್ತಿದ್ದಾಗ ಎದುರಿನಿಂದ ಹೋಂಡಾ ಆ್ಯಕ್ಟಿವ್ ಸ್ಕೂಟಿ ಚಾಲಕ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ನಮಗೆ ಡಿಕ್ಕಿ ಪಡಿಸಿರುತ್ತಾನೆ. ನನ್ನ ಗೆಳೆಯನ ಹೆಸರು ಸಮೀರ್. ಆತನು ಮೋಟಾರ ಸೈಕಲನ್ನು ಚಲಾಯಿಸುತ್ತಿದ್ದನು, ನಾನು ಹಿಂಬದಿ ಸವಾರನಾಗಿ ಕುಳಿತಿದ್ದೆ. ನನ್ನ ಗೆಳೆಯ ಮೋಟಾರ ಸೈಕಲ್ ಚಲಾಯಿಸುತ್ತಿದ್ದ, ನಾನು ಹಿಂಬದಿ ಸವಾರನಾಗಿ ಕುಳಿತಿದ್ದೆ ಎಂಬ ಸಂಗತಿ ನಮ್ಮ ದೂರಿನಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದೂರಿನಲ್ಲಿ ನಾನೇ ಮೋಟಾರ ಸೈಕಲನ್ನು ಚಲಾಯಿಸುತ್ತಿದ್ದೆ ಎಂದು ಬರೆಸಿರುತ್ತಾರೆ ಎಂದರೆ ನಾನು ದೂರನ್ನು ಬರೆಸಿರುವುದಿಲ್ಲ. ನಮ್ಮ ತಂದೆ ದೂರನ್ನು ನೀಡಿರುತ್ತಾರೆ.

ಹೋಂಡಾ ಆ್ಯಕ್ಟಿವ್ ಸ್ಕೂಟಿ ಚಾಲಕನ ತಪ್ಪಿ ನಿಂದ ಅಪಘಾತವಾಗಿರುತ್ತದೆ. ನನ್ನ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಹೋಂಡಾ ಆ್ಯಕ್ಟಿವ್ ಸ್ಕೂಟಿ ಚಾಲಕನ ತಪ್ಪಿನಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ನನ್ನ ಮುಂದೆಲೆಗೆ ಮತ್ತು ಬಲ ಕಣ್ಣಿಗೆ ಒಳಪೆಟ್ಟಾಗಿ ನನ್ನ ಬಲ ಮುಖದ ಮೂಳೆ ಮುರಿತ ಗಾಯವಾಗಿರುತ್ತದೆ. ಅಪಘಾತವಾದ ನಂತರ ನನ್ನನ್ನು ವಿಕರಾಬಾದಿನ ಈಶ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ತಾಂಡೂರಿನ ಬಾಲಾಜಿ ನರ್ಸಿಂಗ್ ಹೋಂ ಗೆ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿ 15 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ಸುಮಾರು 4-5 ಲಕ್ಷ ರೂ.ಗಳ ವೈದ್ಯಕೀಯ ವೆಚ್ಚವಾಗಿರುತ್ತದೆ. ಆ ಬಗ್ಗೆ ಆಸ್ಪತ್ರೆಯ ವೆಚ್ಚದ ರಸೀದಿಗಳನ್ನು ಹಾಜರುಪಡಿಸಿರುತ್ತೇನೆ. 4-5 ಲಕ್ಷ ರೂ.ಗಳ ವೈದ್ಯಕೀಯ ವೆಚ್ಚಗಳ ರಸೀದಿಗಳನ್ನು ಹಾಜರುಪಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವೈದ್ಯಕೀಯ ದಾಖಲಾತಿಗಳನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸಂಪೂರ್ಣ ಗುಣಮುಖವಾದ ನಂತರ ಆಸ್ಪತ್ರೆಯಿಂದ ನಾನು ಬಿಡುಗಡೆ ಹೊಂದಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಕುತ್ತಿಗೆಗೆ ನೋವು ಇರುತ್ತದೆ. ನಾನು ಯಾವುದೇ ತರಹದ ನ್ಯೂನತೆಯನ್ನು ಹೊಂದದೆ ಆಸ್ಪತ್ರೆಯಿಂದ ಬಿಡುಗಡೆ ಹೊಂದಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತಕ್ಕಿಂತ ಮೊದಲು ಹೇಗೆ ನಾನು ಕೆಲಸ ಮಾಡುತ್ತಿದ್ದೆ ಅದೇ ರೀತಿ ಈಗ ನಾನು ಮಾಡುತ್ತಿರುತ್ತೇನೆ ಎಂದರೆ ಸರಿಯಲ್ಲ. ನಾನು ಅರಿವಿನ ಸಮಸ್ಯೆಯಿಂದ ಬಳಲುತ್ತಿದ್ದೇನೆ. ನಾನು ಸಂಪೂರ್ಣ ಗುಣಮುಖವಾಗಿದ್ದರೂ ಗುಣಮುಖವಾಗಿಲ್ಲ ಎಂದು ನಿ.ಪಿ-9 ರಂತೆ ಸುಳ್ಳು ಅಂಗನ್ಯೂನತಾ ವೈದ್ಯಕೀಯ ದಾಖಲಾತಿಯನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ಅಪಘಾತವಾದಾಗ ನನ್ನ ವಯಸ್ಸು 18 ವರ್ಷ ಮೇಲ್ಪಟ್ಟಿತ್ತು. ಅದಕ್ಕೆ ಪೂರಕವಾಗಿ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ. ನನ್ನ ಜನ್ಮ ದಿನಾಂಕ 11-07-2007 ಇರುತ್ತದೆ. ಆ ಪ್ರಕಾರ ಅಪಘಾತವಾದಾಗ ನನ್ನ ವಯಸ್ಸು 17 ನೇ ವರ್ಷ ಚಾಲ್ತಿಯಲ್ಲಿತ್ತು ಎಂದರೆ ಸರಿ. ವಾಹನ ಚಾಲನಾ ಪರವಾನಗಿ ನನ್ನದು ಇರುವುದಿಲ್ಲ. ನನ್ನ ಗೆಳೆಯ ಸಮೀರನು ಚಾಲನಾ ಪರವಾನಗಿ ಹೊಂದಿರುತ್ತಾನೆ. ಹೋಂಡಾ ಆ್ಯಕ್ಟಿವ್ ಸ್ಕೂಟಿ ಚಾಲಕನ ಚಾಲನಾ ಪರವಾನಗಿ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ.

ಅಪಘಾತವು ರಸ್ತೆಯ ಮಧ್ಯೆ ಆಗಿದೆ ಎಂದರೆ ಸರಿ. ಆ ಕಾರಣ ಎರಡೂ ವಾಹನಗಳ ಸವಾರರ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಅಪಘಾತವು ಎದುರು-ಬದುರು ಆಗಿರುತ್ತದೆ ಎಂದರೆ ಸರಿ. ನಾನು ಅಪಘಾತವಾಗುವುದಕ್ಕಿಂತ ಮುಂಚೆ ಯಾವುದೇ ಉದ್ಯೋಗ ಮಾಡುತ್ತಿರಲಿಲ್ಲ ಎಂದರೆ ಸರಿ. ಆಗ ನಾನು ವಿದ್ಯಾರ್ಥಿ ಇದ್ದೆ. ಆಗ ನಾನು ಯಾವುದೇ ಆದಾಯ ಗಳಿಕೆ ಮಾಡುತ್ತಿರಲಿಲ್ಲ ಎಂದರೆ ಸರಿ. ಅಪಘಾತಪಡಿಸಿದ ಆ್ಯಕ್ಟಿವ್ ಸ್ಕೂಟಿ ನಮ್ಮ ಗ್ರಾಮಕ್ಕೆ ಸಂಬಂಧಿಸಿದ್ದು ಇರುವುದಿಲ್ಲ. ಅದು ಯಾವ ಊರಿನವರಿಗೆ ಸಂಬಂಧಿಸಿದ್ದು ನನಗೆ ಗೊತ್ತಿಲ್ಲ. ಅಪಘಾತವು ನಮ್ಮ ತಪ್ಪಿ ನಿಂದ ಆಗಿದ್ದರೂ ವಿಮಾ ಕಂಪನಿಯಿಂದ ಪರಿಹಾರ ಪಡೆಯಲು ಸುಳ್ಳು ಅರ್ಜಿಯನ್ನು ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕೇಳಿರುವ ಪರಿಹಾರಕ್ಕೆ ಯಾವುದೇ ಆಧಾರ ಇಲ್ಲ ಎಂದರೆ ಸರಿಯಲ್ಲ.

**(ಸಾಕ್ಷಿಯು ತೆಲುಗು ಭಾಷೆಯಲ್ಲಿ ನುಡಿದ ಸಾಕ್ಷಿ ಹೇಳಿಕೆಯನ್ನು ಮಾನ್ಯ ಎಸ್.ಎನ್.ಬಿ ವಕೀಲರು ಕನ್ನಡದಲ್ಲಿ ನುಡಿದ ಅನುವಾದದ ಮೂಲಕ ಸಾಕ್ಷಿ ಹೇಳಿಕೆಯನ್ನು ದಾಖಲಿಸಲಾಯಿತು)**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ,
ಚಿಂಚೋಳಿ.